**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ ರವರ ನಿಯಮ 72 ರ ಸೂಚನೆಗೆ ಉತ್ತರಿಸುವ ಬಗ್ಗೆ</u>**

**ಪ್ರಶ್ನೆ:-**

ಒಳಾಡಳಿತ ಇಲಾಖೆಗೆ ಸಂಬಂಧಿಸಿದಂತೆ, DPAR ಇಲಾಖೆಯ ದಿನಾಂಕ:09.01.2025 ರಂದು DPAR ಪತ್ರ ಸಂಖ್ಯೆ:ಸಿಆಸುಇ 178 ಹೈಕಕೋ 2024 HD/285/PPS/2024 ರ ಪತ್ರದ ಆಕ್ಷೇಪಾರ್ಹ ಹಿಂಬರಹದಿಂದ ನೊಂದ ಕಲ್ಯಾಣ ಕರ್ನಾಟಕ ನೌಕರರು ಭಾರತೀಯ ಸಂವಿಧಾನದ 371 J ಸಚಿವ ಸಂಪುಟ ಉಪ ಸಮಿತಿಗೆ ಗೊಂದಲ ನಿವಾರಣೆ ಕೋರಿ ಮನವಿ ಮಾಡಿಕೊಂಡಾಗ, ಮನವಿ ಪುರಸ್ಕರಿಸಿದ 371 J ಸಚಿವ ಸಂಪುಟ ಉಪ ಸಮಿತಿಯ ಮಾನ್ಯ ಅಧ್ಯಕ್ಷರು ದಿನಾಂಕ:26.11.2025ರ ಸಭೆಯಲ್ಲಿ ಈ ಕೆಳಕಂಡಂತೆ 'ಒಳಾಡಳಿತ ಇಲಾಖೆಗೆ ಸಂಬಂಧಿಸಿದಂತೆ KSISF ಇಲಾಖೆಯ ಶ್ರೀ ಭೀಮ ಮುಖ್ಯ ಪೇದೆಯವರಿಗೆ 371J ರಡಿ ಅರ್ಹತೆ ಹೊಂದಿದ ದಿನಾಂಕದಿಂದ ಜೇಷ್ಠತೆಯನ್ನು ಮರು ನಿಗದಿಪಡಿಸುವಂತೆ ಕೋರಿರುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು, ಸದರಿ ನೌಕರರನ್ನು ಒಳಗೊಂಡಂತೆ ಅರ್ಹ ಅಧಿಕಾರಿ/ನೌಕರರಿಗೆ ಹುದ್ದೆ ಮತ್ತು ಅರ್ಹತೆಯನ್ನು ಆಧರಿಸಿ ಕಾಲ್ಪನಿಕ ಜೇಷ್ಠತೆಯನ್ನು ನಿಗದಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಇದರಂತೆ ಮೊದಲು, ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರನ್ವಯ ನಿಯಮ 3 ಸ್ಥಳೀಯ ವೃಂದಗಳ ರಚನೆ,(2) (ಸಿ) ನಲ್ಲಿ "ರಾಜ್ಯ ವ್ಯಾಪ್ತಿ ಸ್ಥಳೀಯ ವೃಂದ ಎಂದರೆ ವೃಂದದ ಅಧಿಕಾರ ವ್ಯಾಪ್ತಿಯು ರಾಜ್ಯ ಸರ್ಕಾರದಲ್ಲಿ ಅಥವಾ ಸಂಸ್ಥೆಯಲ್ಲಿ ನಿಕಾಯದಲ್ಲಿ ಅಥವಾ ಸಂಘಟನೆಯಲ್ಲಿ ರಾಜ್ಯ ವ್ಯಾಪ್ತಿಯದ್ದಾಗಿರುವಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದ ಮತ್ತು ಪ್ರಾದೇಶಿಕ ಸ್ಥಳೀಯ ವೃಂದದ ವಿಲೀನದ ಮೂಲಕ ರಚಿಸಲಾದ ಸ್ಥಳೀಯ ವೃಂದ. ಈ ನಿಯಮ ಆಧರಿಸಿ ಹಾಗೂ KSCS RPP ACT 1973 ರ ಸೆಕ್ಷನ್ 4 ರನ್ವಯ ಹಾಗೂ 2019 ರಿಂದ 2024 ರವರೆಗೆ ಸದರಿ ಪ್ರಾಧಿಕಾರದಲ್ಲಿ 371J ಮೀಸಲಾತಿಯ ಸ್ಥಳೀಯ ವೃಂದ ರಚನೆಯಲ್ಲಿ ಹಾಗೂ ಹುದ್ದೆಗಳ ಹಂಚಿಕೆಯಲ್ಲಿ ಲೋಪದೋಷಗಳು ಆಗಿದ್ದರಿಂದ ಅವುಗಳನ್ನು ಸರಿಪಡಿಸುವಾಗ ಅಗತ್ಯ ಅನಿವಾರ್ಯ ಇದ್ದಲ್ಲಿ ಮಾತ್ರ KSCS RPP ACT 1973 Section 5 ಅನ್ನು ಚಲಾಯಿಸಿ ಆದರೂ KSISF ನಲ್ಲಿ ಮುಂಬಡ್ತಿಯ ಲೋಪದೋಷಗಳನ್ನು ನಿಯಮಾನುಸಾರ ಸರಿಪಡಿಸುವ ಅವಕಾಶ ಇರುವುದನ್ನು 371J ಸಚಿವ ಸಂಪುಟ ಉಪ ಸಮಿತಿಯು ಮನಗಂಡಿದೆ. ಆದರೆ ಇದರಂತೆ ಸರಿ ಪಡಿಸಿರುವುದಿಲ್ಲ. ಇದನ್ನು ಸರಿಪಡಿಸಲು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಆದೇಶ ಕಾಯುವೇ, ಈ ಆಡಳಿತ ಕ್ರಮದಿಂದ ಕಲ್ಯಾಣ ಕರ್ನಾಟಕ ನೌಕರರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಹಾಗೂ ಈ ಬಗ್ಗೆ ಇರುವ ಗೊಂದಲಗಳ ನಿವಾರಣೆ ಕೋರಿ ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**<u>ಉತ್ತರ:-</u>**

ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯು 2011 ಸಾಲಿನಲ್ಲಿ ಸೃಜನೆಗೊಂಡಿದ್ದು, ಸದರಿ ಪಡೆಯು 03 ಪಡೆಗಳ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದ್ದರಿಂದ ಸದರಿ ಪಡೆಗಳನ್ನು ರಾಜ್ಯ ಮಟ್ಟದ ಕಛೇರಿಯೆಂದು ಹಾಗೂ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್- ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ಅನುಸಾರ ಬೆಂಗಳೂರು ಕೇಂದ್ರಿತ ಎಲ್ಲಾ 03 ಪಡೆಗಳ ಮಂಜೂರಾತಿ ಬಲಕ್ಕೆ ಶೇ% 08 ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕದ ಸಿಬ್ಬಂದಿಗಳಿಗೆ ಗುರುತಿಸಲಾಗಿದ್ದು, 03 ಪಡೆಗಳ ಒಟ್ಟು 372 ಸಿಬ್ಬಂದಿಗಳಿಗೆ ದಿನಾಂಕ:26/07/2019 ರಲ್ಲಿ ಮುಂಬಡ್ತಿ ನೀಡಲಾಗಿರುತ್ತದೆ.

ಕೆಎಸ್‌ಐಎಸ್‌ಎಫ್ ಘಟಕಗಳಿಗೆ ಮಂಜೂರಾಗಿರುವ ಹುದ್ದೆಗಳಲ್ಲಿ ಕೆಲವು ಹುದ್ದೆಗಳು ಕಲ್ಯಾಣ ಕರ್ನಾಟಕ ಭಾಗದ ಕೆಲವು ಸ್ಥಾವರಗಳಿಗೆ ಸೇರಿದ ಹುದ್ದೆಗಳಾಗಿದ್ದರಿಂದ ಸದರಿ ಕಲ್ಯಾಣ ಕರ್ನಾಟಕ ಭಾಗದ ಸ್ಥಾವರಗಳಿಗೆ ಮಂಜೂರಾಗಿರುವ ಹುದ್ದೆಗಳಿಗೆ ಶೇ% 80 ರಷ್ಟು ಸ್ಥಳೀಯ ಸಿಬ್ಬಂದಿಗಳಿಗೆ ಮತ್ತು ಶೇ 8ರಷ್ಟು ರಷ್ಟು ಸ್ಥಳೀಯೇತರರಿಗೆ ಮೀಸಲಿಡುವ ಸಂಬಂಧ ಕೆಲವು ಸಿಬ್ಬಂದಿಗಳು ಮಾನ್ಯ ಕರ್ನಾಟಕ ಆಡಳಿತ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:3234-3488/2024 ಅನ್ನು ದಾಖಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ದಿನಾಂಕ:31/08/2024 ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ "ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಸ್ಥಾವರಗಳ ಭದ್ರತೆಗೆ ಮಂಜೂರಾಗಿರುವ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದವನ್ನು ಗುರುತಿಸಬೇಕೆ ಅಥವಾ ಸದರಿ ಸ್ಥಾವರಗಳಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳಿಗೆ ಗುರುತಿಸಬೇಕೆ" ಎಂಬ ಬಗ್ಗೆ ಇಲಾಖೆಯು ಸ್ಪಷ್ಟೀಕರಣ ನೀಡುವಂತೆ ಕೋರಲಾಗಿತ್ತು.

ಸರ್ಕಾರದ ಪತ್ರ ಸಂಖ್ಯೆ:ಹೆಚ್.ಡಿ/276/ಪಿಎಎಂ/2023 ದಿನಾಂಕ:07/10/2024ರಲ್ಲಿ, ಕೆಎಸ್‌ಐಎಸ್‌ಎಫ್, ನ ವಿಶೇಷ ಕಾರ್ಯ ವೈಖರಿಯನ್ನು ಪರಿಗಣಿಸಿ, ಕಲ್ಯಾಣ ಕರ್ನಾಟಕ ವಿಭಾಗದ ಸೂಕ್ತ ಸ್ಥಾವರಗಳಿಗೆ ಹಂಚಿಕೆಯಾಗುವ ಹುದ್ದೆಗಳಿಗೆ ಅನುಗುಣವಾಗಿ ಮೀಸಲಾತಿ ನಿಗದಿಪಡಿಸುವಂತೆ ಹಾಗೂ ಈ ಸಂಖ್ಯೆಯಲ್ಲಿ ಬದಲಾವಣೆಯಾದಾಗ ಅದಕ್ಕನುಗುಣವಾಗಿ ಕಲ್ಯಾಣ ಕರ್ನಾಟಕ ಮೀಸಲಾತಿಯನ್ನು ಪರಿಷ್ಕರಿಸಿ ತಿದ್ದುಪಡಿ ಅಧಿಸೂಚನೆಯನ್ನು

ಹೊರಡಿಸಬೇಕಾಗುತ್ತದೆ. ಅದರಂತೆ ಕೆ.ಎಸ್.ಐ.ಎಸ್.ಎಫ್ ಎಲ್ಲಾ ವೃಂದಗಳಿಗೆ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದದ ವರ್ಗೀಕರಣ ಮಾಡಿ ನೇಮಕಾತಿ/ಬಡ್ತಿ ನೀಡಲು ಸೂಕ್ತ ಕ್ರಮ ವಹಿಸುವಂತೆ ನಿರ್ದೇಶಿಸಲಾಗಿದೆ. ಅದರಂತೆ, ಆಂತರಿಕಾ ಭದ್ರತಾ ವಿಭಾಗದ ಕೆ.ಎಸ್.ಐ.ಎಸ್.ಎಫ್ ನ ಹೆಚ್.ಸಿ ಹುದ್ದೆಗಳಿಗೆ ಅಧಿಸೂಚನೆ ಸಂಖ್ಯೆ:06/ಸಿಬ್ಬಂದಿ/ಕೆ.ಎಸ್.ಐ.ಎಸ್.ಎಫ್/ಐ.ಎಸ್.ಡಿ/2024, ದಿ:16/12/2024 ರಲ್ಲಿ ಕಲ್ಯಾಣ ಕರ್ನಾಟಕದ ಸ್ಥಳೀಯ ಹಾಗೂ ಸ್ಥಳಿಯೇತರ ಹುದ್ದೆಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಶ್ರೀ ಭೀಮ, ಪಿಸಿ-508, 1ನೇ ಪಡೆ, ಕೆ.ಎಸ್.ಐ.ಎಸ್.ಎಫ್ ರವರು ದಿನಾಂಕ:10/02/2014ರಂದು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ನೇಮಕಾತಿ ಹೊಂದಿದ್ದು, ಹೆಚ್.ಸಿ ಹುದ್ದೆಯ ಮುಂಬಡ್ತಿಯನ್ನು ಪೂರ್ವಾನ್ವಯವಾಗುವಂತೆ ಪರಿಗಣಿಸಿ ಹೆಚ್.ಸಿ ಹುದ್ದೆಯಲ್ಲಿ ಪರಿಗಣಿತ ದಿನಾಂಕವನ್ನು ನೀಡಿ ಸದರಿ ಪರಿಗಣಿತ ದಿನಾಂಕದಿಂದ ಸೇವಾ ಜೇಷ್ಠತೆಯನ್ನು ಪರಿಗಣಿಸಿ ಎ.ಎಸ್.ಐ ಹುದ್ದೆಗೆ ಮುಂಬಡ್ತಿ ನೀಡುವಂತೆ ಕೋರಿದ್ದರಿಂದ, ಪರಿಷ್ಕರಿಸಿ ನಿಗದಿಪಡಿಸಿದ ಹುದ್ದೆಗಳಿಗಿಂತ ಕಡಿಮೆ ಸಂಖ್ಯೆಯ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿದ್ದರಿಂದ ಅವರುಗಳಿಗೆ 26/07/2019 ರಿಂದಲೇ ಹೆಚ್.ಸಿ ಹುದ್ದೆಗೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಬಹುದೇ ಎಂಬುದರ ಬಗ್ಗೆ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಲಾಗಿದ್ದು, ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಸಂಖ್ಯೆ:ಸಿ.ಆ.ಸು.ಇ 178 ಸೇಹಿಕೋ 2024, ದಿನಾಂಕ:09/01/2025 ರಲ್ಲಿ ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತದೆ.

" The Karnataka State Civil Services (Regulation of Promotion Pay and Pension) Act 1973 ಸೆಕ್ಷನ್ 3ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆ. The Karnataka State Civil Services (Regulation of Promotion Pay and Pension) Rules 1978 ರ ನಿಯಮ 2ರಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡುವ ಪ್ರಕರಣಗಳನ್ನು ವಿವರಿಸಲಾಗಿರುತ್ತದೆ. ಈ ಸಂದರ್ಭಗಳನ್ನು ಹೊರತುಪಡಿಸಿ ಇತರ ಸಂದರ್ಭಗಳಲ್ಲಿ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಮುಂಬಡ್ತಿಗೆ ರಿಕ್ತ ಸ್ಥಾನಗಳು ಲಭ್ಯವಿದ್ದವು ಎಂಬ ಮಾತ್ರಕ್ಕೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ"

ಸರ್ಕಾರವು ನೀಡಿರುವ ನಿರ್ದೇಶಗಳ ಅಡಿಯಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಅಧಿಸೂಚನೆ ಹೊರಡಿಸಿ ಸದರಿ ಅಧಿಸೂಚನೆಯಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ಸಿಬ್ಬಂದಿಗಳಿಗೆ ಲಭ್ಯವಾದ ಹುದ್ದೆಗಳಿಗೆ ಕೆಎಸ್‌ಐಎಸ್‌ಎಫ್ ನ ಘಟಕದ ಆದೇಶ ಸಂಖ್ಯೆ: 06/ ಸಿಬ್ಬಂದಿ /ಕೆ.ಎಸ್.ಐ.ಎಸ್.ಎಫ್/ ಐ.ಎಸ್.ಡಿ/ 2024, ದಿನಾಂಕ:05/02/2025 ರಲ್ಲಿ ಶ್ರೀ ಭೀಮ, ಪಿಸಿ-508, 1ನೇ ಪಡೆ, ಕೆ.ಎಸ್.ಐ.ಎಸ್.ಎಫ್ ಸೇರಿದಂತೆ ಒಟ್ಟು 66 ಸಿಬ್ಬಂದಿಗಳಿಗೆ ಪಿ.ಸಿ ಹುದ್ದೆಯಿಂದ ಹೆಚ್.ಸಿ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹಿಂಬರಹ ಸಂಖ್ಯೆ:ಸಿ.ಆ.ಸು.ಇ 178 ಸೇಹಿಕೋ 2024, ದಿನಾಂಕ:09/01/2025 ರಲ್ಲಿ ನೀಡಿರುವ ಸ್ಪಷ್ಟೀಕರಣ/ನಿರ್ದೇಶನವನ್ನು ಪ್ರಶ್ನಿಸಿ ಮನವಿದಾರರಾದ ಶ್ರೀ.ಭೀಮ, ಹೆಚ್.ಸಿ-779 ಮತ್ತು ಇತರರು ಮಾನ್ಯ ಕೆ.ಎಸ್.ಎ.ಟಿ ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ: 3156-3179/2025 ಅನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ದಿನಾಂಕ:10-08-2026 ರಂದು ವಿಚಾರಣೆ ನಡೆದಿದ್ದು, ಮುಂದಿನ ವಿಚಾರಣೆಯು ದಿನಾಂಕ:16-09-2026ಕ್ಕೆ ನಿಗದಿಯಾಗಿರುತ್ತದೆ. ಪ್ರಸ್ತುತ ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುವುದರಿಂದ ಹಾಗೂ ಸರ್ಕಾರವು ಪೂರ್ವಾನ್ವಯ ಮುಂಬಡ್ತಿಗೆ ಅವಕಾಶ ಇಲ್ಲವೆಂದು ಸ್ಪಷ್ಟೀಕರಣ ನೀಡಿರುವುದರಿಂದ ಸದರಿಯವರಿಗೆ ಪೂರ್ವಾನ್ವಯ ಮುಂಬಡ್ತಿ ನೀಡುವ ಕುರಿತು ಕ್ರಮ ಜರುಗಿಸಲು ಸಾಧ್ಯವಾಗಿರುವುದಿಲ್ಲ.

**ಹೆಚ್‌ಡಿ 302 ಪಿಹೆಚ್‌ಎಸ್ 2026**

(ಪ್ರಿಯಾಂಕ್ ಖರ್ಗೆ)

ಗೃಹ ಸಚಿವರು